ನಿ-72 (153)

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ರವರು ರಾಜ್ಯದ ಹಿಡಕಲ್ ಜಲಾಶಯ ಹಾಗೂ ಜಲಾಶಯದ ಮುಂದಿನ ಆವರಣವನ್ನು ಅಂತೆಯೇ ಮಲಪ್ರಭಾ ಜಲಾಶಯ ಮತ್ತು ಮುಂದಿನ ಆವರಣವನ್ನು ಕೃಷ್ಣರಾಜ ಸಾಗರ ಜಲಾಶಯದ ಮಾದರಿಯಲ್ಲಿ ಅಭಿವೃದ್ಧಿಪಡಿಸಿ ಸಂಗೀತ ಕಾರಂಜಿಗಳನ್ನು ಅಳವಡಿಸಿ ಪ್ರವಾಸಿತಾಣವಾಗಿ ಅಭಿವೃದ್ಧಿಪಡಿಸುವ ಬಗ್ಗೆ ನಿಯಮ–72 ರಡಿಯಲ್ಲಿ ಪ್ರಸ್ತಾಪಿಸಿರುವ ವಿಷಯದ ಕುರಿತು ಮಾನ್ಯ ಮುಖ್ಯಮಂತ್ರಿಯವರ ಉತ್ತರ.**

ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಜಲಾಶಯದ ಮುಂಭಾಗದಲ್ಲಿ ಬೃಂದಾವನ ಮಾದರಿ ಅಭಿವೃದ್ಧಿಪಡಿಸುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಜಲಾಶಯದ ಸುತ್ತಮುತ್ತಲಿನ ಜಿಲ್ಲೆಗಳಿಂದ ಜಲಾಶಯವನ್ನು ವೀಕ್ಷಿಸಲು ಬರುವ ಜನರಿಗೆ ಅನುಕೂಲವಾಗುತ್ತದೆ. ಇದರಿಂದ ಪ್ರವಾಸೋದ್ಯಮವನ್ನು ಉತ್ತೇಜಿಸಿದಂತಾಗುತ್ತದೆ. ಕಿತ್ತೂರರಾಣಿ ಚನ್ನಮ್ಮ, ಸಂಗೋಳ್ಳಿ ರಾಯಣ್ಣ, ಜೀವನ ಕುರಿತು ಉದ್ಯಾನವನ, ಬೋಟಿಂಗ್ ವ್ಯವಸ್ಥೆ ನಿರ್ಮಾಣ ಮಾಡಬಹುದಾಗಿರುತ್ತದೆ. ಹಿಡಕಲ್ ಜಲಾಶಯಕ್ಕೆ ಸಮೀಪ ಇರುವ ಗೋಕಾಕ ಫಾಲ್ಸ್, ಗೊಡಚಿನಮಲ್ಕಿ ಫಾಲ್ಸ್, ಇಲ್ಲಿಗೆ ಬರುವ ಜನರು ಸಹ ಬೃಂದಾವನವನ್ನು ವೀಕ್ಷಿಸಬಹುದಾಗಿರುತ್ತದೆ, ಮಹಾರಾಷ್ಟ್ರ ರಾಜ್ಯದ ಕೊಲ್ಲಾಪೂರದ ಪ್ರಖ್ಯಾತ ಲಕ್ಷ್ಮೀ ಗುಡಿಯು ಕೇವಲ ಒಂದು ಘಂಟೆಯ ದಾರಿಯಾಗಿದ್ದು ಇದರಿಂದ ನೆರೆಯ ರಾಜ್ಯದಿಂದಲೂ ಸಹ ಜನರನ್ನು ಆಕರ್ಷಿಸಬಹುದಾಗಿದೆ. ಸದ್ಯಕ್ಕೆ ಈ ಬಗ್ಗೆ ಸರ್ಕಾರದಲ್ಲಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಮಲಪ್ರಭಾ ಜಲಾಶಯ ಮತ್ತು ಮುಂದಿನ ಆವರಣವನ್ನು ಕೃಷ್ಣರಾಜ ಸಾಗರ ಜಲಾಶಯದ ಮಾದರಿಯಲ್ಲಿ ಅಭಿವೃದ್ದಿಪಡಿಸಲು ಮಲಪ್ರಭಾ ಜಲಾಶಯದ ಮುಂದಿನ ಆವರಣದಲ್ಲಿ ಸ್ಥಳಾವಕಾಶದ ಕೊರತೆಯಿರುವುದು ಹಾಗೂ ಪ್ರಸಕ್ತ ಜಲಾಶಯ ಸುತ್ತಮುತ್ತಲಿನ ಪ್ರದೇಶದಲ್ಲಿ ಸಂಗೀತ ಕಾರಂಜಿಗಳನ್ನು ಅಳವಡಿಸಿ ಪ್ರವಾಸಿತಾಣವಾಗಿ ಅಭಿವೃದ್ದಿಪಡಿಸುವ ಕುರಿತು ಸದ್ಯ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

**ಸಂಖ್ಯೆ: ಜಸಂಇ 46 ಡಬ್ಲ್ಯೂಎಲ್ಎ 2021**

(ಬಿ.ಎಸ್ ಯಡಿಯೂರಪ್ಪ)
ಮುಖ್ಯಮಂತ್ರಿ